ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್
KPTCL AND ESCOMs PENSION AND GRATUITY TRUSTS
Ph No. 080-22291150
Fax No. 080-22223558
E-mail: pgtrustkptcl@gmail.com
6th Floor,
Kaveri Bh avan,
Bangalore-560009.

ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ19/2023-24/C45-01 ದಿನಾಂಕ 11 APR 2023

# ಸುತ್ತೋಲೆ

ವಿಷಯ: ದಿನಾಂಕ 01.04.2022 ರಿಂದ ಜಾರಿಗೆ ಬರುವಂತೆ ಪುನರ್ ವಿಮರ್ಶಿತ ಪಿಂಚಣಿ/ ಕುಟುಂಬ ಪಿಂಚಣಿ ನಿಗದಿಪಡಿಸುವಾಗ ಅನುಸರಿಸಬೇಕಾದ ಅಂಶಗಳ ಕುರಿತು.

ಉಲ್ಲೇಖ:
1. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/18239/2010-11 ದಿನಾಂಕ 12.05.2011.
2. ಆರ್ಥಿಕ ಸಲಹೆಗಾರರು(ಲೆ & ಸಂ)ರವರ ಸುತ್ತೋಲೆ ಸಂಖ್ಯೆ. ಕೆಸಿಒ01/39724 ದಿನಾಂಕ 22.09.2012.
3. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/86460/2018-19 ದಿನಾಂಕ 12.04.2019.
4. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/33359/2022-23 ದಿನಾಂಕ 28.03.2023.

***********

ಉಲ್ಲೇಖ-4 ಆದೇಶದಲ್ಲಿ 31.03.2022ರಲ್ಲಿದ್ದಂತೆ ಪಿಂಚಣಿ/ಕುಟುಂಬ ಪಿಂಚಣಿದಾರರ ಪಿಂಚಣಿ/ಕುಟುಂಬ ಪಿಂಚಣಿಯನ್ನು ಹಾಗೂ ದಿನಾಂಕ 01.04.2017 ರಿಂದ 31.03.2022ರ ಅವಧಿಯಲ್ಲಿ ನಿವೃತ್ತಿಯಾದ/ ಸೇವೆಯಲ್ಲಿರುವಾಗಲೇ ನಿಧನರಾದ ಮತ್ತು ದಿನಾಂಕ 01.04.2022ರ ನಂತರ ನಿವೃತ್ತಿಯಾಗಿರುವ/ ನಿವೃತ್ತಿಯಾಗುತ್ತಿರುವ/ನಿವೃತ್ತಿ ನಂತರ ನಿಧನರಾಗುವ/ಸೇವೆಯಲ್ಲಿರುವಾಗಲೇ ನಿಧನರಾಗುವ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳನ್ನು ಪರಿಷ್ಕರಿಸಲಾಗಿರುತ್ತದೆ.

ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯನ್ನು ಏಪ್ರಿಲ್-2023 ರಿಂದ ಮುಂದೆ ಪಾವತಿ ಮಾಡಲು ಸೂಚಿಸಲಾಗಿರುತ್ತದೆ. ಆದ್ದರಿಂದ, ಸಿಬ್ಬಂದಿ/ಅಧಿಕಾರಿಗಳ ಅನುಕೂಲಕ್ಕಾಗಿ ಈ ಕೆಳಗಿನಂತೆ ಉದಾಹರಣೆಗಳನ್ನು ನೀಡಲಾಗಿದೆ.

1. **ದಿನಾಂಕ 01.04.2017ಕ್ಕಿಂತ ಹಿಂದಿನ ಪಿಂಚಣಿ/ಕುಟುಂಬ ಪಿಂಚಣಿದಾರರ ಪಿಂಚಣಿ ಮತ್ತು ಕುಟುಂಬ ಪಿಂಚಣಿ ನಿಗದಿಪಡಿಸುವಿಕೆ:**

(₹ ಗಳಲ್ಲಿ)

| | | |
|---|---|---|
| ಅ | ಮೂಲ ಪಿಂಚಣಿ/ಕುಟುಂಬ ಪಿಂಚಣಿ ದಿನಾಂಕ 31.03.2022ಕ್ಕೆ | 8,785 |
| ಆ | ದಿನಾಂಕ 01.04.2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಮೂಲ ಪಿಂಚಣಿ /ಕುಟುಂಬ ಪಿಂಚಣಿ ಆದೇಶ ಸಂಖ್ಯೆ ಕವಿಪ್ರನಿನಿ/ಬಿ16/33359/ 2022-23 ದಿನಾಂಕ 28.03.2023ರ ಪ್ರಕಾರ ಉಂಟಾದ ಹೆಚ್ಚಳ (₹ 8,785x20%) | 1,757 |
| ಇ | ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿ | 10,542 |
| ಈ | ಕಾಲಾನುಕಾಲಕ್ಕೆ ತುಟ್ಟಿಭತ್ಯೆ ಲೆಕ್ಕಹಾಕುವ ಮೂಲ ಪಿಂಚಣಿ/ಕುಟುಂಬ ಪಿಂಚಣಿ 01.04.2022ಕ್ಕೆ | 10,542 |

ಈ ರೀತಿ ಕ್ರಮವಾಗಿ ಪಿಂಚಣಿ/ಕುಟುಂಬ ಪಿಂಚಣಿ ಮೊತ್ತ ಪ್ರತಿ ತಿಂಗಳು ಕನಿಷ್ಠ ₹ 10,542/-ಗಳಿಗೆ ಕಡಿಮೆಯಾಗದಂತೆ, ಗರಿಷ್ಠ ಕುಟುಂಬ ಪಿಂಚಣಿ ಪ್ರತಿ ತಿಂಗಳು ₹ 52,578/-ಗಳಿಗೆ ಮೀರದಂತೆ ಹಾಗೂ ಗರಿಷ್ಠ ಪಿಂಚಣಿ ಪ್ರತಿ ತಿಂಗಳು ₹ 87,628/-ಗಳಿಗೆ ಮೀರದಂತೆ ಪರಿಷ್ಕರಿಸಿ, ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯನ್ನು ಆಂತರಿಕ ಪರಿಶೋಧನೆಗೆ ಒಳಪಡಿಸಿ ನಿಗದಿಪಡಿಸಲು ಕ್ರಮ ಕೈಗೊಳ್ಳುವುದು. ಪಿಂಚಣಿ/ ಕುಟುಂಬ ಪಿಂಚಣಿ ಆದೇಶದ ಎರಡೂ ಭಾಗಗಳಲ್ಲಿ (Pensioner/Office copy) ಸಂಬಂಧಪಟ್ಟ ಅಧಿಕಾರಿಗಳು ಮತ್ತು ಲೆಕ್ಕಪರಿಶೋಧನೆ ಅಧಿಕಾರಿಗಳು ದೃಢೀಕರಿಸಿ, ಮೇಲ್ಮುದ್ರೆ (Enfacement) ಯೊಂದಿಗೆ ನಮೂದಿಸುವುದು.

ಈ ಪ್ರಕಾರ ಪಿಂಚಣಿ/ಕುಟುಂಬ ಪಿಂಚಣಿಯನ್ನು ನಿಗದಿಪಡಿಸಿದ ನಂತರ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯನ್ನು ಪಿಂಚಣಿ ಸ್ಕೇಲ್ ರಿಜಿಸ್ಟರ್ ಹಾಗೂ Pension Payment Management System ತಂತ್ರಾಂಶದಲ್ಲಿ ನಮೂದಿಸುವುದು.

2. **ದಿನಾಂಕ 01.04.2017 ರಿಂದ 31.03.2022ರ ಅವಧಿಯಲ್ಲಿ ನಿವೃತ್ತಿಯಾದ/ನಿಧನಗೊಂಡ ಸಿಬ್ಬಂದಿಗಳ ಪಿಂಚಣಿ ಮತ್ತು ಕುಟುಂಬ ಪಿಂಚಣಿ ನಿಗದಿಪಡಿಸುವಿಕೆ:**

(₹ ಗಳಲ್ಲಿ)

| | | |
|---|---|---|
| ಅ | ಮೂಲ ಪಿಂಚಣಿ/ಕುಟುಂಬ ಪಿಂಚಣಿ ದಿನಾಂಕ 31.03.2022ಕ್ಕೆ | 11,889 |
| ಆ | ದಿನಾಂಕ 01.04.2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಮೂಲ ಪಿಂಚಣಿ/ಕುಟುಂಬ ಪಿಂಚಣಿ ಆದೇಶ ಸಂಖ್ಯೆ ಕವಿಪ್ರನಿನಿ/ಬಿ16/33359/2022-23 ದಿನಾಂಕ 28.03.2023ರ ಪ್ರಕಾರ ಉಂಟಾದ ಹೆಚ್ಚಳ (₹ 11,889x20%) | 2,378 |
| ಇ | ಕಾಲಾನುಕಾಲಕ್ಕೆ ತುಟ್ಟಿಭತ್ಯೆ ಲೆಕ್ಕಹಾಕುವ ಮೂಲ ಪಿಂಚಣಿ/ಕುಟುಂಬ ಪಿಂಚಣಿ 01.04.2022ಕ್ಕೆ | 14,267 |

ಈ ರೀತಿ ಕ್ರಮವಾಗಿ ಪಿಂಚಣಿ/ಕುಟುಂಬ ಪಿಂಚಣಿ ಮೊತ್ತ ಪ್ರತಿ ತಿಂಗಳು ಕನಿಷ್ಠ ₹ 14,267/-ಗಳಿಗೆ ಕಡಿಮೆಯಾಗದಂತೆ, ಗರಿಷ್ಠ ಕುಟುಂಬ ಪಿಂಚಣಿ ಪ್ರತಿ ತಿಂಗಳು ₹ 63,921/-ಗಳಿಗೆ ಮೀರದಂತೆ ಹಾಗೂ ಗರಿಷ್ಠ ಪಿಂಚಣಿ ಪ್ರತಿ ತಿಂಗಳು ₹ 1,06,533/-ಗಳಿಗೆ ಮೀರದಂತೆ ಪರಿಷ್ಕರಿಸಿ, ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯನ್ನು ಆಂತರಿಕ ಪರಿಶೋಧನೆಗೆ ಒಳಪಡಿಸಿ ನಿಗದಿಪಡಿಸಲು ಕ್ರಮ ಕೈಗೊಳ್ಳುವುದು. ಪಿಂಚಣಿ/ ಕುಟುಂಬ ಪಿಂಚಣಿ ಆದೇಶದ ಎರಡೂ ಭಾಗಗಳಲ್ಲಿ (Pensioner/Office copy) ಸಂಬಂಧಪಟ್ಟ ಅಧಿಕಾರಿಗಳು ಮತ್ತು ಲೆಕ್ಕಪರಿಶೋಧನೆ ಅಧಿಕಾರಿಗಳು ದೃಢೀಕರಿಸಿ, ಮೇಲ್ಮುದ್ರೆ (Enfacement) ಯೊಂದಿಗೆ ನಮೂದಿಸುವುದು.

ಈ ಪ್ರಕಾರ ಪಿಂಚಣಿ/ಕುಟುಂಬ ಪಿಂಚಣಿಯನ್ನು ನಿಗದಿಪಡಿಸಿದ ನಂತರ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯನ್ನು ಪಿಂಚಣಿ ಸ್ಕೇಲ್ ರಿಜಿಸ್ಟರ್ ಹಾಗೂ Pension Payment Management System ತಂತ್ರಾಂಶದಲ್ಲಿ ನಮೂದಿಸುವುದು.

3. **ದಿನಾಂಕ 01.04.2022ರ ನಂತರ ನಿವೃತ್ತಿಯಾಗಿರುವ/ನಿವೃತ್ತಿಯಾಗುವ/ನಿವೃತ್ತಿ ನಂತರ ನಿಧನರಾಗುವ/ಸೇವೆಯಲ್ಲಿರುವಾಗಲೇ ನಿಧನರಾಗುವ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳ ಪರಿಷ್ಕರಣೆ:**

ಇಂತಹ ಪ್ರಕರಣಗಳಲ್ಲಿ ದಿನಾಂಕ 01.04.2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ನಿಗದಿ ಮಾಡಿದ ನಂತರ ಸಕ್ಷಮ ಪಿಂಚಣಿ ಅಧೀಕರಿಸುವ ಪ್ರಾಧಿಕಾರವು (ಕವಿಪ್ರನಿನಿ/ವಿಸಕಂಗಳ ಆರ್ಥಿಕ ಸಲಹೆಗಾರರು) ಪಿಂಚಣಿ ಅಧೀಕರಿಸಿದ ತರುವಾಯ ಪಿಂಚಣಿ/ಕುಟುಂಬ ಪಿಂಚಣಿ, ಪರಿವರ್ತಿತ ಪಿಂಚಣಿ ಮತ್ತು ನಿವೃತ್ತಿ/ಮರಣ ಉಪದಾನವನ್ನು ಪಾವತಿ ಮಾಡಲು ಕ್ರಮ ಕೈಗೊಳ್ಳುವುದು.

4. **80 ವರ್ಷ ದಾಟಿದ ಪಿಂಚಣಿ/ಕುಟುಂಬ ಪಿಂಚಣಿದಾರರಿಗೆ ಹೆಚ್ಚುವರಿ ಪಿಂಚಣಿ/ ಕುಟುಂಬ ಪಿಂಚಣಿ ನಿಗದಿಪಡಿಸುವ ಕುರಿತು:**

ಉಲ್ಲೇಖ-1ರ ಆದೇಶದಲ್ಲಿ ದಿನಾಂಕ 01.07.1993ಕ್ಕಿಂತ ಮುಂಚಿತವಾಗಿ ನಿವೃತ್ತರಾದ ಅಥವಾ ಸೇವೆಯಲ್ಲಿರುವಾಗಲೇ ಮೃತರಾದ ನೌಕರರ ಪ್ರಕರಣಗಳಲ್ಲಿ ದಿನಾಂಕ 01.04.2006ರಿಂದ ಜಾರಿಗೆ ಬರುವಂತೆ, 80 ವರ್ಷ ದಾಟಿದವರಿಗೆ 20%ರಷ್ಟು, 85 ವರ್ಷ ದಾಟಿದವರಿಗೆ 30%ರಷ್ಟು ಮತ್ತು 90 ವರ್ಷ ದಾಟಿದವರಿಗೆ 50%ರಷ್ಟು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ಹೆಚ್ಚಿಸಲು ಅನುಮೋದಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ-2ರ ಸುತ್ತೋಲೆಯಲ್ಲಿ ಈ ರೀತಿ ಉಂಟಾದ ನಿವೃತ್ತಿ ಪಿಂಚಣಿ/ಕುಟುಂಬ ಪಿಂಚಣಿಯ ಹೆಚ್ಚಳವನ್ನು ಪ್ರತ್ಯೇಕ ಅಂಶವಾಗಿ ಮುಂದುವರೆಸಲು ಸೂಚಿಸಲಾಗಿರುತ್ತದೆ (Distinct Element).

ಉಲ್ಲೇಖ-3ರ ಆದೇಶದಲ್ಲಿ ದಿನಾಂಕ 01.01.2019ರಿಂದ ಜಾರಿಗೆ ಬರುವಂತೆ, ನಿವೃತ್ತರಾದ ಅಥವಾ ಸೇವೆಯಲ್ಲಿರುವಾಗಲೇ ಮೃತರಾದ ನೌಕರರ ಪ್ರಕರಣಗಳಲ್ಲಿ 80 ವರ್ಷ ದಾಟಿದವರಿಗೆ 20%ರಷ್ಟು, 85 ವರ್ಷ ದಾಟಿದವರಿಗೆ 30%ರಷ್ಟು, 90 ವರ್ಷ ದಾಟಿದವರಿಗೆ 40%, 95 ವರ್ಷ ದಾಟಿದವರಿಗೆ 50% ಮತ್ತು 100 ವರ್ಷ ದಾಟಿದವರಿಗೆ 100%ರಷ್ಟು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ಹೆಚ್ಚಿಸಲು ಅನುಮೋದಿಸಲಾಗಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ, ದಿನಾಂಕ 01.04.2022 ರಿಂದ ಜಾರಿಗೆ ಬರುವಂತೆ ದಿನಾಂಕ 31.03.2022ರಲ್ಲಿದ್ದಂತೆ ಮೂಲ ಪಿಂಚಣಿ/ಕುಟುಂಬ ಪಿಂಚಣಿಯನ್ನು ಉಲ್ಲೇಖ-4ರ ಆದೇಶದನುಸಾರ ಪರಿಷ್ಕರಿಸಿದ ನಂತರದ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿ ಮೊತ್ತದ ಮೇಲೆ 80 ವರ್ಷ ದಾಟಿದವರಿಗೆ 20%ರಷ್ಟು, 85 ವರ್ಷ ದಾಟಿದವರಿಗೆ 30%ರಷ್ಟು, 90 ವರ್ಷ ದಾಟಿದವರಿಗೆ 40%, 95 ವರ್ಷ ದಾಟಿದವರಿಗೆ 50% ಮತ್ತು 100 ವರ್ಷ ದಾಟಿದವರಿಗೆ 100%ರಷ್ಟು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ಹೆಚ್ಚಿಸಲು ಕ್ರಮ ಕೈಗೊಳ್ಳುವುದು. ಈ ರೀತಿ ಹೆಚ್ಚಿಸಲಾದ ಮೊತ್ತವನ್ನು ಪ್ರತ್ಯೇಕ ಅಂಶವಾಗಿ ಮುಂದುವರೆಸುವುದು (Distinct Element). ಇದನ್ನು ಕೆಳಗಿನ ಉದಾಹರಣೆಯಲ್ಲಿ ವಿವರಿಸಿದೆ.

(₹ ಗಳಲ್ಲಿ)

| | | |
|---|---|---|
| **ಹಂತ-1** | | |
| ಅ | ಮೂಲ ಪಿಂಚಣಿ/ಕುಟುಂಬ ಪಿಂಚಣಿ ದಿನಾಂಕ 31.03.2022ಕ್ಕೆ | 10,000 |
| ಆ | 80 ವರ್ಷ ವಯೋಮಿತಿಗನುಗುಣವಾಗಿ ಹೆಚ್ಚಿಸಲಾಗಿರುವ ಶೇಕಡಾವಾರು ಪಿಂಚಣಿ 20% ಪ್ರತ್ಯೇಕ ಅಂಶವಾಗಿ ತೋರಿಸುವುದು (Distinct Element) | 2,000 |
| ಇ | ಕಾಲಾನುಕಾಲಕ್ಕೆ ತುಟ್ಟಿಭತ್ಯೆ ಲೆಕ್ಕಹಾಕುವ ಮೂಲ ಪಿಂಚಣಿ/ಕುಟುಂಬ ಪಿಂಚಣಿ 31.03.2022ಕ್ಕೆ | 12,000 |
| **ಹಂತ-2** | | |
| ಈ | ದಿನಾಂಕ 01.04.2022 ರಿಂದ ಪರಿಷ್ಕೃತ ಮೂಲ ಪಿಂಚಣಿ/ಕುಟುಂಬ ಪಿಂಚಣಿ ಆದೇಶ ಸಂಖ್ಯೆ ಕವಿಪ್ರನಿನಿ/ಬಿ16/33359/2022-23 ದಿನಾಂಕ 28.03.2023ರ ಪ್ರಕಾರ (₹ 10,000+(₹ 10,000x20%)) | 12,000 |
| ಉ | 80 ವರ್ಷ ವಯೋಮಿತಿಗನುಗುಣವಾಗಿ ಹೆಚ್ಚಿಸಲಾಗುವ ಶೇಕಡಾವಾರು ಪಿಂಚಣಿ 20% ಪ್ರತ್ಯೇಕ ಅಂಶವಾಗಿ ತೋರಿಸುವುದು (Distinct Element) (₹ 12,000x 20%) (₹ 2,000/- ಬದಲಿಗೆ ₹ 2,400/-ನ್ನು ಅಧಿಕ ಪಿಂಚಣಿಯಾಗಿ ಪರಿಗಣಿಸುವುದು) | 2,400 |
| ಊ | ಕಾಲಾನುಕಾಲಕ್ಕೆ ತುಟ್ಟಿಭತ್ಯೆ ಲೆಕ್ಕಹಾಕುವ ಮೂಲ ಪಿಂಚಣಿ/ಕುಟುಂಬ ಪಿಂಚಣಿ 01.04.2022ಕ್ಕೆ | 14,400 |
| **ಹಂತ-3 ಇದೇ ಪಿಂಚಣಿ/ಕುಟುಂಬ ಪಿಂಚಣಿದಾರರು 85 ವರ್ಷ ದಾಟಿದಾಗ** | | |
| ಋ | 85 ವರ್ಷ ವಯೋಮಿತಿಗನುಗುಣವಾಗಿ ಹೆಚ್ಚಿಸಲಾಗುವ ಶೇಕಡಾವಾರು ಪಿಂಚಣಿ 30% ಪ್ರತ್ಯೇಕ ಅಂಶವಾಗಿ ತೋರಿಸುವುದು (Distinct Element) (₹ 12,000x 30%) (₹ 2,400/- ಬದಲಿಗೆ ₹ 3,600/-ನ್ನು ಅಧಿಕ ಪಿಂಚಣಿಯಾಗಿ ಪರಿಗಣಿಸುವುದು) | 3,600 |
| ಎ | ಕಾಲಾನುಕಾಲಕ್ಕೆ ತುಟ್ಟಿಭತ್ಯೆ ಲೆಕ್ಕಹಾಕುವ ಮೂಲ ಪಿಂಚಣಿ/ಕುಟುಂಬ ಪಿಂಚಣಿ (12,000+3,600) | 15,600 |
| ಇದೇ ಕ್ರಮದಲ್ಲಿ 90 ವರ್ಷ, 95 ವರ್ಷ ಮತ್ತು 100 ವರ್ಷ ದಾಟಿದವರಿಗೆ ಕ್ರಮವಾಗಿ, 40%, 50% ಮತ್ತು 100% ರಷ್ಟು ಮೂಲ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನ ಹೆಚ್ಚಿಸಲು ಕ್ರಮ ಕೈಗೊಳ್ಳುವುದು. | | |

ಮೇಲಿನಂತೆ, ಪಿಂಚಣಿ/ಕುಟುಂಬ ಪಿಂಚಣಿ ಹೆಚ್ಚಳವನ್ನು ಆಂತರಿಕ ಪರಿಶೋಧನೆಗೆ ಒಳಪಡಿಸಿ ನಿಗದಿಪಡಿಸಲು ಕ್ರಮ ಕೈಗೊಳ್ಳುವುದು. ಪಿಂಚಣಿ/ಕುಟುಂಬ ಪಿಂಚಣಿ ಆದೇಶದ ಎರಡೂ ಭಾಗಗಳಲ್ಲಿ (Pensioner/Office copy) ಸಂಬಂಧಪಟ್ಟ ಅಧಿಕಾರಿಗಳು ಮತ್ತು ಲೆಕ್ಕಪರಿಶೋಧನೆ ಅಧಿಕಾರಿಗಳು ದೃಢೀಕರಿಸಿ, ಮೇಲ್ಮುದ್ರೆ (Enfacement) ಯೊಂದಿಗೆ ನಮೂದಿಸುವುದು.

ಈ ಪ್ರಕಾರ ಪಿಂಚಣಿ/ಕುಟುಂಬ ಪಿಂಚಣಿಯನ್ನು ನಿಗದಿಪಡಿಸಿದ ನಂತರ ಪರಿಷ್ಕೃತ ಪಿಂಚಣಿ/ ಕುಟುಂಬ ಪಿಂಚಣಿಯನ್ನು ಪಿಂಚಣಿ ಸ್ಕೇಲ್ ರಿಜಿಸ್ಟರ್ ಹಾಗೂ Pension Payment Management System ತಂತ್ರಾಂಶದಲ್ಲಿ ನಮೂದಿಸುವುದು.

5. ದಿನಾಂಕ 01.04.2022ರ ನಂತರ ಪಿಂಚಣಿ/ಕುಟುಂಬ ಪಿಂಚಣಿಯ ಕನಿಷ್ಠ/ಗರಿಷ್ಠ ಮೊತ್ತದ ಸಾರಾಂಶವನ್ನು ಈ ಕೆಳಗಿನಂತೆ ವಿವರಿಸಿದೆ.

(₹ ಗಳಲ್ಲಿ)

| ಅವಧಿ | ವಿವರ | ಕನಿಷ್ಠ | ಗರಿಷ್ಠ | ಷರಾ |
|---|---|---|---|---|
| 01.04.2017ಕ್ಕಿಂತ ಹಿಂದಿನ ಪಿಂಚಣಿ/ಕುಟುಂಬ ಪಿಂಚಣಿದಾರರು | ಪಿಂಚಣಿ | 10,542 | 87,628 | ದಿನಾಂಕ 01.04.2022 ರಿಂದ ಜಾರಿಗೆ ಬರುವಂತೆ |
| | ಕುಟುಂಬ ಪಿಂಚಣಿ | 10,542 | 52,578 | |
| 01.04.2017ರಿಂದ 31.03.2022ರ ಮಧ್ಯದ ಅವಧಿಯಲ್ಲಿನ ಪಿಂಚಣಿ/ ಕುಟುಂಬ ಪಿಂಚಣಿದಾರರು | ಪಿಂಚಣಿ | 14,267 | 1,06,533 | |
| | ಕುಟುಂಬ ಪಿಂಚಣಿ | 14,267 | 63,921 | |
| 01.04.2022ರ ನಂತರದ ಪಿಂಚಣಿ/ಕುಟುಂಬ ಪಿಂಚಣಿದಾರರು | ಪಿಂಚಣಿ | 14,275 | 1,07,375 | |
| | ಕುಟುಂಬ ಪಿಂಚಣಿ | 14,275 | 64,425 | |

*ಸೂಚನೆ: ಸೇವೆಯಲ್ಲಿರುವಾಗಲೇ ನಿಧನಗೊಂಡ ಅವಲಂಬಿತರ ಕುಟುಂಬ ಪಿಂಚಣಿಯ ಗರಿಷ್ಠ ಮಿತಿಯನ್ನು ಕವಿಮಂ ಸೇವಾ ನಿಬಂಧನೆಗಳನುಸಾರ ನಿಯಂತ್ರಿಸುವುದು.

ಉಲ್ಲೇಖ-4ರ ಆದೇಶದಲ್ಲಿ ದಿನಾಂಕ 01.04.2022 ರಿಂದ 31.03.2023ರ ಅವಧಿಯ ಪಿಂಚಣಿ/ಕುಟುಂಬ ಪಿಂಚಣಿಯ ಬಾಕಿ ಪಾವತಿಗೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಈ ಸಂಬಂಧ ಪಿಂಚಣಿ ಬಾಕಿಯನ್ನು Pension Payment Management System ತಂತ್ರಾಂಶದಲ್ಲಿ ಲೆಕ್ಕಾಚಾರ ಮಾಡಲು ವ್ಯವಸ್ಥೆ ಇಲ್ಲದಿರುವುದರಿಂದ ಪಿಂಚಣಿ ಬಟವಾಡೆ ಲೆಕ್ಕಘಟಕಗಳೇ ತಮ್ಮ ಮಟ್ಟದಲ್ಲಿ ಸೂಕ್ತ ಲೆಕ್ಕಾಚಾರ ವ್ಯವಸ್ಥೆ ಮಾಡಿಕೊಳ್ಳುವುದು. ಪಿಂಚಣಿ ಬಾಕಿ ಪಾವತಿಗೆ ನಿಗಮವು ಆದೇಶ ಹೊರಡಿಸಿದ ನಂತರ ಟ್ರಸ್ಟ್‌ಗೆ ನಿಧಿ ಕೋರಿಕೆಯನ್ನು ಸಲ್ಲಿಸಲು ಕ್ರಮ ಕೈಗೊಳ್ಳುವುದು.

ನಿರ್ದೇಶಕರು(ಹಣಕಾಸು),
ಕವಿಪ್ರನಿನಿ ಮತ್ತು ಅಧ್ಯಕ್ಷರು (ಪಿಂ & ಉ ಟ್ರಸ್ಟ್)
ರವರಿಂದ ಅನುಮೋದಿಸಲ್ಪಟ್ಟಿದೆ.

B. Malathi 11/4/23
ಆರ್ಥಿಕ ಸಲಹೆಗಾರರು ಮತ್ತು ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ/ವಿಸಕಂಗಳ ಪಿಂಚಣಿ & ಉಪದಾನ ಟ್ರಸ್ಟ್.

ಪ್ರತಿಗಳು:
1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ನಿರ್ದೇಶಕರು(ಹಣಕಾಸು), ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
5. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು
6. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ.ಮತ್ತು ಮಾ.ಸಂ)ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು,

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ https://kptcl.karnataka.gov.in>KPTCL and ESCOMs Pension and Gratuity Trust ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.
1. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂಗಳು
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂಗಳು
3. ಎಲ್ಲಾ ಅಧಿಕಾರಿಗಳು ನಿಗಮ ಕಾರ್ಯಾಲಯ ಕವಿಪ್ರನಿನಿ, ಕಾವೇರಿ ಬವನ, ಬೆಂಗಳೂರು.

ಪ್ರತಿಗಳು ಮಾಹಿತಿಗಾಗಿ:
1. ಶ್ರೀ ಆರ್.ಹೆಚ್.ಲಕ್ಷ್ಮೀಪತಿ, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (ನೋ.ಸಂ.659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ ಕೆ.ಶಿವಣ್ಣ, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು
4. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಇಂಜಿನಿಯರುಗಳ ಸಂಘ, ಬೆಂಗಳೂರು
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರುಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.